www.ecourtsindia.com

# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
## ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.

## ಸಿಸಿ ಸಂಖ್ಯೆ **834/2017**

ಚಾಸಾಃ **2** ಪ್ರಾಸಾಃ **1**

| | |
|---|---|
| ಹೆಸರು | : ರಮೇಶ್ |
| ತಂದೆಯ ಹೆಸರು | :ದಿ. ಬಾಬು ಪೂಜಾರಿ |
| ಪ್ರಾಯ | : 48 ವರ್ಷ |
| ಉದ್ಯೋಗ | : ಗಾರೆ ಕೆಲಸ |
| ವಾಸ | : ತೆಂಕಕರಾಂದೂರು ಗ್ರಾಮ, ಬೆಳ್ತಂಗಡಿ ತಾಲೂಕು |

ದಿನಾಂಕ 06-12-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಚಾಸಾ-1 ನನ್ನ ತಾಯಿ, ಪ್ರಸ್ತುತ ಅವರು ಮೃತಪಟ್ಟಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿರುವುದಿಲ್ಲ. ಚಾಸಾ-1 ರವರ ಚಿನ್ನದ ಸರ ಹೇಗೆ ಕಾಣೆಯಾಗಿರುತ್ತದೆಂದು ಮತ್ತು ಯಾರು ತೆಗೆದುಕೊಂಡು ಹೋಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಚಾಸಾ-1 ರವರ ಚಿನ್ನದ ಸರವನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿಯು ಸದರಿ ಚಿನ್ನದ ಸರದ ಫೋಟೋಗಳನ್ನು ನೋಡಿ ಗುರುತಿಸಿದ್ದು ಸದರಿ ಫೋಟೋಗಳನ್ನು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)*

ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ತಕ್ಷೀರು ದಿನ ಬೆಳಗ್ಗೆ ನಾನು ಮನೆಯಲ್ಲಿ ಬೋರ್ ವೆಲ್ ಪಂಪಿನ ಕೆಲಸ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಚಾಸಾ-1 ರವರು ಬೆಳಗ್ಗೆ ಜ್ವರಕ್ಕೆ ಔಷದ ತರಲು ಅಳದಂಗಡಿ ಡಾ. ಸುಷ್ಮಾ ಡೊಂಗ್ರೇ ರವರಲ್ಲಿಗೆ ಹೋಗಿ ಬರುವುದಾಗಿ ಹೇಳಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಾವು ಮನೆಯಲ್ಲಿರುವಾಗ ಮದ್ಯಾಹ್ನ ಸಮಯ ಚಾಸಾ-1 ರವರು ಜೋರಾಗಿ ಬೊಬ್ಬೆ ಹಾಕಿಕೊಂಡು ಮನೆಗೆ ಬಂದರು ಎಂದರೆ ಸರಿಯಲ್ಲ. ನಾವು ಏನೆಂದು ವಿಚಾರಿಸಿದಾಗ ಚಾಸಾ-1 ರವರು ಆಸ್ಪತ್ರೆಗೆ ಹೋದವರು ಪೆರಲ್ದಕಟ್ಟೆಯಲ್ಲಿ ಬಸ್ಸಿನಿಂದ ಇಳಿದವರು ಬಳಂಜ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿರುವಾಗ ವಿಠ್ಠಲ ಹೆಗ್ಡೆ ರವರ ರಬ್ಬರ್ ತೋಟದ ಬಳಿ ಒಂದು ಬೈಕಿನಲ್ಲಿ ಇಬ್ಬರು ನನ್ನನ್ನು ಹಿಂದಿಕ್ಕಿ ಮುಂದೆ ಹೋಗಿ ವಾಪಸ್ಸು ಬೈಕನ್ನು ತಿರುಗಿಸಿ ಬಂದು ನನ್ನ ಬಳಿ ಬೈಕ್ ನಿಲ್ಲಿಸಿ ಹಿಂದುಗಡೆ ಕುಳಿತಿದ್ದ ವ್ಯಕ್ತಿ

This is a True Copy of the Court Records Online. Authenticated @ districts.ecourtsindia.com/cnr/KADK510015592017/truecopy/order-1.pdf

ಬೈಕಿನಿಂದ ಇಳಿದು ನನ್ನ ಕುತ್ತಿಗೆಗೆ ಕೈ ಹಾಕಿ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಎಳೆದು ತೆಗೆದು ಅದೇ ಬೈಕಿನಲ್ಲಿ ಪರೋಡಿತ್ತಾಯನ ಕಟ್ಟೆ ಕಡೆಗೆ ಪರಾರಿಯಾಗಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಕೂಡಲೇ ನಾನು ಮತ್ತು ಇತರರು ಸೇರಿ ಬೈಕ್ ಸವಾರರನ್ನು ಪೆರ್ಲದಕಟ್ಟೆ ಮತ್ತು ಅಳದಂಗಡಿ ಕಡೆಗೆ ಹೋಗಿ ಹುಡುಕಾಡಿದ್ದು ಪತ್ತೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಕುತ್ತಿಗೆಯಲ್ಲಿದ್ದ ಸುಮಾರು 1 ಪವನ್ ತೂಕದ ಚಿನ್ನದ ಸರವನ್ನು ಆರೋಪಿಗಳು ಕಿತ್ತುಕೊಂಡು ಹೋಗಿದ್ದು, ಇದರ ಅಂದಾಜು ಮೌಲ್ಯ 20,000 ರೂ ಆಗಿರಬಹುದು ಎಂದರೆ ಸರಿಯಲ್ಲ. ಈ ಘಟನೆಯು ತಕ್ಷೀರು ದಿನ ಮಧ್ಯಾಹ್ನ 11-30 ಗಂಟೆಗೆ ಆಗಿರಬಹುದು ಎಂದರೆ ಸರಿಯಲ್ಲ. ಬಳಿಕ ನಾನು ಚಾಸಾ-1 ರವರನ್ನು ಕರೆದುಕೊಂಡು ಹೋಗಿ ವೇಣೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆಗೆ ಸಂಬಂಧಿಸಿದಂತೆ ಈಗ ಮೇಲೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

ದಿನಾಂಕ 30-7-2017 ರಂದು ಚಾಸಾ-13 ರವರು ಒಬ್ಬ ಉದ್ದನೆ ವ್ಯಕ್ತಿಯಾಂದಿಗೆ ನಮ್ಮ ಮನೆಗೆ ಬಂದಿದ್ದು, ಸದರಿ ವ್ಯಕ್ತಿಯನ್ನು ತೋರಿಸಿ ಈತನು ಅವನ ಸ್ನೇಹಿತನೊಂದಿಗೆ ಬೈಕಿನಲ್ಲಿ ಬಂದು ಚಾಸಾ-1 ರವರ ಕುತ್ತಿಗೆಯಿಂದ ಚಿನ್ನದ ಸರವನ್ನು ಎಳೆದುಕೊಂಡು ಹೋಗಿರವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯ ಹೆಸರು ವಿಚಾರಿಸಿ ತಿಳಿಯಲಾಗಿ ಉಮೇಶ್ ಬಿ ಎನ್ ಬಿನ್ ನಂಜಪ್ಪ ಎಂದು ಈತನೊಂದಿಗೆ ಇದ್ದ ಇನ್ನೊಬ್ಬನ ಹೆಸರು ನವೀನ್ ಎಂದು ತಿಳಿಯಿತು ಎಂದರೆ ಸರಿಯಲ್ಲ. ನಂತರ ವಿಚಾರಿಸಿ ತಿಳಿಯಲಾಗಿ ದಿನಾಂಕ 27-7-2017 ರಂದು ಸಂಜೆ ಸುಮಾರು 5 ಗಂಟೆಗೆ 1, 2 ನೇ ಆರೋಪಿಗಳು ಮತ್ತು ವೆಂಕಟೇಶ್ ರವರು ಕಳುವು ಮಾಡಿದ ಒಂದು ಕೆ ಟಿ ಎಂ ಬೈಕ್ ಮತ್ತು ರಾಯಲ್ ಎನ್ಫಿಲ್ಡ್ ಬೈಕಿನಲ್ಲಿ ಬರುತ್ತಿರುವಾಗ ಚಾಸಾ-13 ರವರು ತನ್ನ ಸಿಬ್ಬಂಧಿಗಳೊಂದಿಗೆ ಚಾರ್ಮಾಡಿ ಚೆಕ್ ಪೋಸ್ಟಿನಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದ ಸಮಯ ಪತ್ತೆ ಹಚ್ಚಿರುತ್ತಾರೆಂದು ತಿಳಿಯಿತು ಎಂದರೆ ಸರಿಯಲ್ಲ. ಸದರಿ ಸಮಯ 2 ನೇ ಆರೋಪಿ ಓಡಿ ಪರಾರಿಯಾದ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಅಲ್ಲದೇ ಚಾಸಾ-1 ರವರ ಕುತ್ತಿಗೆಯಿಂದ ಸುಲಿಗೆ ಮಾಡಿದ ಚಿನ್ನದ ಸರವನ್ನು ಮತ್ತು ದೇವಸ್ಥಾನ ಹುಂಡಿ ಕಳುವು, ಮನೆ ಕಳುವು, ಬೈಕ್ ಕಳುವು ಮಾಡಿದ ಸ್ವತ್ತುಗಳನ್ನು 1 ನೇ ಆರೋಪಿ ತನ್ನ ಬಿಡಾಡಿದಲ್ಲಿ ಇಟ್ಟಿದ್ದನ್ನು ಪೊಲೀಸರಿಗೆ ತೋರಿಸಿ ಹಾಜರುಪಡಿಸಿದ್ದನ್ನು ಪೊಲೀಸರು ಸ್ವಾಧೀನಪಡಿಸಿದ ಳ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ಈ ದಿನ ಚಾಸಾ-1 ರವರಿಂದ ಸುಲಿಗೆ ಮಾಡಿದ ಚಿನ್ನದ ಸರವನ್ನು ಪೊಲೀಸರು ನನಗೆ ತೋರಿಸಿದ್ದು ನಾನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿ. ಆರೋಪಿಯನ್ನು ಸರಿಯಾಗಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಮುಂದಕ್ಕೆ ಆರೋಪಿಯನ್ನು ಮತ್ತು ಚಿನ್ನದ ಸರವನ್ನು ನೋಡಿ ಗುರುತಿಸುತ್ತೇನೆಂದು ಈಗ ಮೇಲೆ ಓದಿ ಹೇಳಿದಂತೆ ಪೊಲೀಸರಿಗೆ

This is a True Copy of the Court Records Online. Authenticated @ districts.ecourtsindia.com/cnr/KADK510015592017/truecopy/order-1.pdf

ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಮರು ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **2** ನೇ ಆರೋಪಿ ಪರ ವಕೀಲರಿಂದಃ

ಏನೂ ಇರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ**.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆಳರಚ್ಚು ಮಾಡಲಾಯಿತು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

**(ಸಾ. ಓ. ಹೇ. ಕೇ. ಸ. ಇ. ಎ. ಒ.)**

This is a True Copy of the Court Records Online. Authenticated @ districts.ecourtsindia.com/cnr/KADK510015592017/truecopy/order-1.pdf